OS 68/2015 DW-1

ದಿನಾಂಕಃ **03.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

1. 1 ನೇ ಪ್ರತಿವಾದಿ ರಂಗಪ್ಪನ ಮಗ ಎಂದರೆ ಸರಿ. 2 ನೇ ಪ್ರತಿವಾದಿ ರಂಗಪ್ಪನ ಸೊಸೆ ಎಂದರೆ ಸರಿ. ನನ್ನ ತಾತ ಮರಣ ಶಾಸನ ಬರೆಯುವ ಕಾಲಕ್ಕೆ ಅವರ ಆರೋಗ್ಯ ಸರಿಯಿರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ಹೇಳಿಗೆ ಮೇರೆಗೆ ಆರೋಗ್ಯ ಸರಿ ಇತ್ತು ಎಂದು ಉತ್ತರಿಸಿರುತ್ತಾರೆ. 1 ನೇ ಪ್ರತಿವಾದಿ ನನ್ನ ತಂದೆ ಸದರಿಯವರಿಗೆ ಈ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇತ್ತು, ಅವರಿಗೆ ವಿಚಾರಣೆ ಮಾಡಲು ತೊಂದರೆ ಇಲ್ಲ. 2011 ನೇ ಇಸವಿಯಲ್ಲಿ ತಿಮ್ಮಕ್ಕ ನನಗೆ ಮೊದಲನೆ ವಿಲ್ ಮಾಡಿರುತ್ತಾರೆ. ತಿಮ್ಮಕ್ಕ ಒಟ್ಟು ಎಷ್ಟು ವಿಲ್ ಗಳನ್ನು ಮಾಡಿರುತ್ತಾರೆ ಎಂದು ಗೊತ್ತಿಲ್ಲ.

2. ದಿಃ 16-01-2009 ರಲ್ಲಿ ತಿಮ್ಮಕ್ಕರವರು ನನ್ನ ತಾಯಿ ಸುಜಾತ ಹಾಗೂ ನನ್ನ ಅತ್ತೆ ಲಲಿತ ಇವರಿಗೆ ವಿಲ್ ಬರೆದಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ದಿಃ 16-01-2009 ರಲ್ಲಿ ಮಾಡಿದ ವಿಲ್ ಮೊದಲನೆ ವಿಲ್ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ವಿಲ್ ದಿಃ 16-01-2009 ರ ವಿಲ್ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ದಿಃ 17-01-2009 ರಲ್ಲಿ ದಿಃ 16-01-2009 ರ ವಿಲ್ ನ್ನು ರದ್ದು ಗೊಳಿಸಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ.

3. ನನ್ನ ತಾತ ರಂಗಪ್ಪನಿಗೆ ಒಟ್ಟು ಕುಟುಂಬದ ಆಸ್ತಿ ಎಂದರೆ 6 ಎಕರೆ 6 ಗುಂಟೆ ಮಾತ್ರ ಇತ್ತು ಎಂದು ಉತ್ತರಿಸಿರುತ್ತಾರೆ. ನನ್ನ ತಾತ ರಂಗಪ್ಪನಿಗೆ ಒಟ್ಟು ಕುಟುಂಬದ ಆಸ್ತಿಯಾಗಿ 30 ಎಕರೆ 39 ಗುಂಟೆ ಇದ್ದು , ಆ ಪೈಕಿ ಈ ದಾವಾ ಆಸ್ತಿ 6 ಎಕರೆ 6 ಗುಂಟೆ ಎಂದರೆ ಸರಿ. ಸದರಿ 6 ಎಕರೆ 6 ಗುಂಟೆ ಜಮೀನು ಒಟ್ಟು ಕುಟುಂಬದ ಆಸ್ತಿ ಎಂದರೆ ಸಾಕ್ಷಿಯು ನನ್ನ ತಾತನ ಸ್ವಯಾರ್ಜಿತ ಆಸ್ತಿ ಎಂದು ಉತ್ತರಿಸಿರುತ್ತಾರೆ.

4. ನನ್ನ ತಾತ ನನಗೆ ಮತ್ತು 5 ನೇ ಪ್ರತಿವಾದಿಗೆ ಯಾವುದೇ ವಿಲ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಿಲ್ ನ್ನು ನಾವು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಲ್ ನ್ನು ಯಾವ ಕಾಲಕ್ಕೆ ಬರೆಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ

ತಂದೆಯಿಂದ ತಿಳಿದುಕೊಂಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಈ ವಿಚಾರವಾಗಿ ನನ್ನ ತಂದೆಯ ವಿಚಾರಣೆ ಮಾಡಿಸಲು ತೊಂದರೆ ಇರುವುದಿಲ್ಲ.

5. ದಾವಾ ಆಸ್ತಿಯಲ್ಲಿ ವಾದಿಯವರಿಗೂ ಸಮಾನ ಹಕ್ಕು ಇದ್ದು , ಆಸ್ತಿಯನ್ನು ಲಪಟಾಯಿಸುವ ದುರುದ್ದೇಶದಿಂದ ವಿಲ್ ನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಶಿರಾ ನಗರಕ್ಕೆ ಸೇರಿದ್ದು , ಒಳ್ಳೆಯ ಮೌಲ್ಯ ಇದೆ ಎಂದರೆ ,ಆ ಬಗ್ಗೆ ನನಗೆ ಗೊತ್ತಿಲ್ಲ.ಸದರಿ ಎಲ್ಲಾ ವಿಷಯಗಳು ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ಅಜ್ಜಿ ತಿಮ್ಮಕ್ಕ ನವರಿಗೆ ಯಾವುದೇ ಅಧಿಕಾರ ಇಲ್ಲದೇ ಇದ್ದರೂ ಆಸ್ತಿ ಲಪಟಾಯಿಸುವ ಉದ್ದೇಶದಿಂದ ವಿಲ್ ನ್ನು ಮಾಡಿಕೊಟ್ಟಿರುತ್ತಾರೆ ಎಂದರೆ , ಆ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಬಗ್ಗೆ ದಿಃ 06-11-2016 , ದಿಃ 16-01-2009 , ದಿಃ 17-01-2009 , ದಿಃ 05-02-2011 ದಿನಾಂಕಗಳಂದು ಸುಮಾರು 4 ವಿಲ್ ಗಳು ಆಗಿದ್ದು ಮತ್ತು ರದ್ದತಿಯಾದ ಬಗ್ಗೆ ನನಗೆ ಗೊತ್ತಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ವಿಲ್ ಪತ್ರ ತಯಾರಿಸಲು ದಾಖಲೆ ಯಾರು ತಂದು ಕೊಟ್ಟರು , ಯಾರು ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸಾಕ್ಷಿದಾರರು ಗೊತ್ತು , ಉಳಿದ ವಿಷಯ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.